


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಯುದ್ಧಾನಂತರದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–05–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

**ಸರಿಯ ರಜೀಅ್**‌ನ ಪ್ರಸ್ತಾಪ ನಡೆಯುತ್ತಿತ್ತು. ಹದೀಸುಗಳಲ್ಲಿ ಮತ್ತು ಚರಿತ್ರೆಯಲ್ಲಿ ಇದರ ಬಗ್ಗೆ ಇನ್ನಷ್ಟು ವಿವರಣೆ ಇದೆ. ಸಹೀಹ್ ಬುಖ಼ಾರಿಯಲ್ಲಿ ರಜೀಅ್‌ನ ಕುರಿತು ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಹತ್ತು ವ್ಯಕ್ತಿಗಳ ಒಂದು ತಂಡವನ್ನು ಸ್ಥಿತಿಗತಿಗಳ ಬಗ್ಗೆ ಅರಿಯಲು ಕಳುಹಿಸಿದರು ಮತ್ತು ಹಝ್ರತ್ ಆಸಿಮ್ ಬಿನ್ ಸಾಬಿತ್ ಅನ್ಸಾರಿ(ರ)ರನ್ನು ಅಮೀರ್ ಆಗಿ ನೇಮಿಸಿದರು. ಬನೂ ಲಹ್‌ಯಾನ್ ಎಂಬ ಎದುರಾಳಿ ಗೋತ್ರದ ಇನ್ನೂರು ಬಿಲ್ಲುಗಾರರೊಂದಿಗೆ ಈ ಮುಸ್ಲಿಮರ ಮುಖಾಮುಖಿಯಾಯಿತು. ಅವರನ್ನು ನೋಡಿ ಮುಸ್ಲಿಮರು ಒಂದು ಗುಡ್ಡೆಯಲ್ಲಿ ಅಭಯ ಪಡೆದರು. ಮುಸ್ಲಿಮರಿಗೆ ಅಭಯ ನೀಡುವುದಾಗಿಯೂ ಅವರನ್ನು ವಧಿಸದೇ ಇರುವುದಾಗಿಯೂ ಎದುರಾಳಿಗಳು ಮಾತು ಕೊಟ್ಟರು. ಸರಿಯದ ಅಮೀರ್ ಆದ ಹಝ್ರತ್ ಆಸಿಮ್ ಬಿನ್ ಸಾಬಿತ್ ಅನ್ಸಾರಿ(ರ) ಹೀಗೆ ಹೇಳಿದರು: ನನ್ನ ಬಗ್ಗೆ ಹೇಳುವುದಾದರೆ, ನಾನು ಅವಿಶ್ವಾಸಿಗಳ ಅಭಯದಲ್ಲಿ ನಿಲ್ಲುವುದಿಲ್ಲ. ಅನಂತರ ಎಲ್ಲರೂ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನಮ್ಮ ಸ್ಥಿತಿಯ ಬಗ್ಗೆ ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿಕೊಡು. ಸತ್ಯನಿಷೇಧಿಗಳು ಅವರ ಮೇಲೆ ಬಾಣಗಳನ್ನು ಚಲಾಯಿಸಿದರು. ಹಝ್ರತ್ ಆಸಿಮ್(ರ) ಸಮೇತ ಏಳು ಸಹಾಬಿಯರು ಶಹೀದ್ ಆದರು.

ಅಭಯ ಪಡೆಯಲು ಮೂವರು ಗುಡ್ಡೆಯಿಂದ ಕೆಳಗೆ ಇಳಿದರು. ಎದುರಾಳಿಗಳು ಆ ಮೂವರನ್ನು ಹಿಡಿದು ಹಗ್ಗದಿಂದ ಕಟ್ಟಿದರು. ಈ ಮೂವರು ಸಹಾಬಿಯರಲ್ಲಿ ಒಬ್ಬರಾದ ಹಝ್ರತ್ ಅಬ್ದುಲ್ಲಾಹ್ ಬಿನ್ ತಾರಿಖ್(ರ) ಹೇಳಿದರು: ಇದು ನೀವು ಮಾಡಿದ ವಾಗ್ದಾನದ ಮೊದಲ ಉಲ್ಲಂಘನೆಯಾಗಿದೆ. ಅಲ್ಲಾಹನಾಣೆ, ನಾನು ನಿಮ್ಮೊಂದಿಗೆ ಬರಲಾರೆನು. ಆಗ ಸತ್ಯನಿಷೇಧಿಗಳು ಮೊದಲು ಅವರನ್ನು ಒತ್ತಾಯಪಡಿಸಿದರು. ಅವರು ಒಪ್ಪದೇ ಇದ್ದಾಗ ಅವರನ್ನು ಅಲ್ಲೇ ಶಹೀದ್ ಮಾಡಿದರು. ಉಳಿದ ಇಬ್ಬರು ಸಹಾಬಿಯರಾದ ಹಝ್ರತ್ ಖು಼ಬೈಬ್(ರ) ಮತ್ತು ಹಝ್ರತ್ ಝೈದ್ ಬಿನ್ ದಸ್‌ನ(ರ)ರನ್ನು ಸತ್ಯನಿಷೇಧಿಗಳು ಕೊಂಡುಹೋಗಿ ಮಕ್ಕದಲ್ಲಿ ಮಾರಾಟ ಮಾಡಿದರು. ಹಝ್ರತ್ ಖು಼ಬೈಬ್(ರ)ರನ್ನು ಬನೂ ಹಾರಿಸ್ ಬಿನ್ ಆಮಿರ್ ಬಿನ್ ನೌಫಲ್ ಬಿನ್ ಅಬ್ದು ಮನಾಫ್ ಖರೀದಿ ಮಾಡಿದನು.

ಬುಖ಼ಾರಿಯ ವರದಿ ಪ್ರಕಾರ ಹತ್ತು ಸಹಾಬಿಯರ ಈ ತಂಡ ಬೇಹುಗಾರಿಕೆಗಾಗಿಯೇ ರಹಸ್ಯವಾಗಿ ಹೋಗುತ್ತಿತ್ತು. ಅವರು ನೆಲಕ್ಕೆ ಎಸೆದ ಖರ್ಜೂರದ ಬೀಜಗಳನ್ನು ಗುರುತಿಸಿ ಮದೀನದ ಮುಸ್ಲಿಮರು ಬಂದಿರುವುದಾಗಿ ತಿಳಿದ ಒಬ್ಬ ಮಹಿಳೆ ಬೊಬ್ಬೆ ಹಾಕಿದಾಗ ಶತ್ರುಗಳು ಮುಸ್ಲಿಮರ ಮೇಲೆ ದಾಳಿ ನಡೆಸಿದರು. ಆದರೆ ಹೆಚ್ಚಿನ ಚರಿತ್ರೆಗಾರರು ಹೀಗೆ ಹೇಳುತ್ತಾರೆ: ಈ ತಂಡ ಆಸುಪಾಸಿನ ಸ್ಥಿತಿಗತಿಗಳ ಅವಲೋಕನಕ್ಕಾಗಿ ಹೊರಡಲು ತಯಾರಾಗಿ ನಿಂತಿತ್ತು. ಅಷ್ಟರಲ್ಲಿ ಇಸ್ಲಾಮಿನ ಬಗ್ಗೆ ತಿಳಿಸಿಕೊಡಲು ಕೆಲವು ವ್ಯಕ್ತಿಗಳನ್ನು ಕಳುಹಿಸಿಕೊಡಬೇಕೆಂದು ಮನವಿ ಮಾಡುತ್ತಾ ಅಝ್ಲ್ ಮತ್ತು ಖಾರ ಗೋತ್ರಗಳಿಂದ ಕೆಲವು ಜನರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದಿದ್ದರು. ಹೀಗೆ ಬಂದಿದ್ದ ಸಂಘದ ಜೊತೆಗೆ ಹಝ್ರತ್ ಪೈಗಂಬರ್(ಸ) ಮುಸ್ಲಿಮರ ಈ ತಂಡವನ್ನು ಕಳುಹಿಸಿದರು.

ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಮತ್ತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸಹ ಚರಿತ್ರೆಯ ಅನೇಕ ಗ್ರಂಥಗಳಿಂದ ಗ್ರಹಿಸಿ ಹೀಗೆ ಹೇಳಿರುವರು: ಮುಸ್ಲಿಮರು ರಹಸ್ಯವಾಗಿ ಯಾತ್ರೆ ಮಾಡಿದ್ದಾಗಿ ಬುಖ಼ಾರಿ ಅಥವಾ ಕೆಲವು ಚರಿತ್ರೆಯ ಗ್ರಂಥಗಳಲ್ಲಿ ಇರುವ ಪ್ರಸ್ತಾಪವು ವರದಿಗಾರರ ಮರೆವಿನಿಂದ ಉಂಟಾದ ಪ್ರಮಾದವೆಂದು ತೋರುತ್ತದೆ. ಏಕೆಂದರೆ ಆ ತಂಡಕ್ಕೆ ರಹಸ್ಯವಾಗಿ ಹೋಗುವ ಅಗತ್ಯವಿರಲಿಲ್ಲ. ಏಕೆಂದರೆ ಆ ತಂಡ ಅಝ್ಲ್ ಮತ್ತು ಖಾರದ ಜನರ ಜೊತೆಗೆ ಹೋಗುತ್ತಿತ್ತು. ಆದರೆ ಶತ್ರುಗಳ ಒಳಸಂಚಿನ ಪ್ರಕಾರ ಅಝ್ಲ್ ಮತ್ತು ಖಾರದ ವ್ಯಕ್ತಿಗಳು ಮುಸ್ಲಿಮರ ಜೊತೆಗೆ ಅಸ್‌ಫಾನ್ ಮತ್ತು ಮಕ್ಕಾದ ಮಾರ್ಗ ಮಧ್ಯೆ ತಲುಪಿದಾಗ ಅವರು ವಾಗ್ದಾನದ ಉಲ್ಲಂಘನೆ ಮಾಡುತ್ತಾ ಮತ್ತು ಮೊದಲೇ ತೀರ್ಮಾನಿಸಲಾದ ಯೋಜನೆಯ ಪ್ರಕಾರ ಬನೂ ಲಹ್‌ಯಾನ್ ಗೋತ್ರಕ್ಕೆ ಮುಸ್ಲಿಮರ ಆಗಮನದ ಸುದ್ದಿ ಮುಟ್ಟಿಸಿರಬಹುದು. ಹೀಗೆ ಅವರು ಇನ್ನೂರು ದಾಳಿಗಾರರ ಜೊತೆಗೆ ಅಲ್ಲಿಗೆ ತಲುಪಿದರು. **ವಲ್ಲಾಹು ಅಅ್‌ಲಮ್**.

ಹಝ್ರತ್ ಆಸಿಮ್(ರ) ಧೈರ್ಯದಿಂದ ಹೋರಾಡಿ ಶಹೀದ್ ಆದ ಬಗ್ಗೆ ವಿಶದವಾದ ಪ್ರಸ್ತಾಪವಿದೆ. ಅವರು ಮೊದಲು ಬಿಲ್ಲುಗಾರಿಕೆಯ ಮೂಲಕ ಶತ್ರುಗಳೊಂದಿಗೆ ಹೋರಾಡಿದರು. ಬಾಣಗಳು ಮುಗಿದುಹೋದಾಗ ಈಟಿಯಿಂದ ಶತ್ರುಗಳ ಮೇಲೆ ದಾಳಿ ನಡೆಸಿದರು. ಈಟಿ ಕೂಡ ತುಂಡಾಗಿ ಕೇವಲ ಖಡ್ಗ ಬಾಕಿ ಉಳಿದಾಗ ಖಡ್ಗದೊಂದಿಗೆ ಶತ್ರುಗಳನ್ನು ಎದುರಿಸಿದರು. ತಾನು ಶಹೀದ್ ಆಗುವುದೆಂದು ಅವರಿಗೆ ಖಚಿತವಾದಾಗ ಅವರು ತನ್ನ ಮೃತದೇಹದ ಗೌರವದ ಬಗ್ಗೆ ಚಿಂತಿತರಾದರು. ಏಕೆಂದರೆ ಸತ್ಯನಿಷೇಧಿಗಳು ಯಾರನ್ನಾದರೂ ಶಹೀದ್ ಮಾಡಿದರೆ ಅವರ ಮೃತದೇಹವನ್ನು ತುಳಿಯುತ್ತಿದ್ದರು ಮತ್ತು ನಗ್ನಗೊಳಿಸುತ್ತಿದ್ದರು. ಅವರು ಅಲ್ಲಾಹನಲ್ಲಿ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್,

ನಾನು ದಿನದ ಮೊದಲ ಭಾಗದಲ್ಲಿ ನಿನ್ನ ಧರ್ಮದ ಸಂರಕ್ಷಣೆ ಮಾಡಿದ್ದೇನೆ. ಆದ್ದರಿಂದ ದಿನದ ಉಳಿದ ಭಾಗದಲ್ಲಿ ನೀನು ನನ್ನ ಮಾನದ ಸಂರಕ್ಷಣೆ ಮಾಡು. ಅನಂತರ ಅವರು ಶಹೀದ್ ಆದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಘಟನೆಯ ಪ್ರಸ್ತಾಪ ಮಾಡುತ್ತಾ ಬರೆಯುತ್ತಾರೆ: ಒಬ್ಬ ದೊಡ್ಡ ಮುಶ್ರಿಕ್ ಸರದಾರನನ್ನು ಹಿಂದೊಮ್ಮೆ ಹಝ್ರತ್ ಆಸಿಮ್(ರ) ವಧಿಸಿದ್ದರು. ಶಹೀದ್ ಆದವರಲ್ಲಿ ಆಸಿಮ್ ಬಿನ್ ಸಾಬಿತ್(ರ) ಸಹ ಇರುವರು ಎಂದು ಮಕ್ಕಾದ ಖುರೈಶಿಗಳಿಗೆ ಗೊತ್ತಾದಾಗ ಹಝ್ರತ್ ಆಸಿಮ್(ರ)ರ ತಲೆ ಅಥವಾ ದೇಹದ ಯಾವುದಾದರೂ ಭಾಗವನ್ನು ತರಲು ಅವರು ಕೆಲವು ಜನರನ್ನು ಕಳುಹಿಸಿದರು. ಯಾವ ಸರದಾರನನ್ನು ಹಝ್ರತ್ ಆಸಿಮ್(ರ) ವಧಿಸಿದ್ದರೋ ಆತನ ತಾಯಿ ಹೀಗೆ ಪಣತೊಟ್ಟಿದ್ದಳು: 'ನಾನು ನನ್ನ ಪುತ್ರನ ಕೊಲೆಗಾರನ ತಲೆಬುರುಡೆಯಲ್ಲಿ ಶರಾಬು ಸುರಿದು ಕುಡಿಯುವೆ.' ಆದರೆ ಅಲ್ಲಾಹನು ಮಾಡಿದ್ದು ಏನೆಂದರೆ, ಆ ಜನರು ಹಝ್ರತ್ ಆಸಿಮ್(ರ)ರ ಮೃತದೇಹದ ಸಮೀಪಕ್ಕೆ ತಲುಪಿದಾಗ, ಅವರ ಮೃತದೇಹದ ಮೇಲೆ ಜೇನುನೊಣಗಳು ಮತ್ತು ಕಣಜಗಳು ಬಂದು ಗುಂಪುಗೂಡಿದ್ದುವು. ಶತ್ರುಗಳು ಜೇನುನೊಣಗಳನ್ನೂ ಕಣಜಗಳನ್ನೂ ದೂರ ಮಾಡಲು ಬಹಳ ಪ್ರಯತ್ನ ಮಾಡಿದರು. ಆದರೆ ಅವುಗಳು ಅಲ್ಲಿಂದ ಹೋಗಲಿಲ್ಲ. ಕೊನೆಗೆ ಆ ಜನರು ಸೋತು ಅಲ್ಲಿಂದ ಹೊರಟು ಹೋದರು. ಅನಂತರ ಕೂಡಲೇ ಮಳೆ ಮತ್ತು ತೀವ್ರ ಬಿರುಗಾಳಿ ಬಂತು ಹಾಗೂ ಆಸಿಮ್(ರ)ರ ಮೃತದೇಹ ಅಲ್ಲಿಂದ ಎಲ್ಲಿಗೋ ಹರಿದುಕೊಂಡು ಹೋಯಿತು.

ಹಝ್ರತ್ ಆಸಿಮ್(ರ) ಮುಸ್ಲಿಮರಾದಾಗ ಅವರು ಹೀಗೆ ಪ್ರತಿಜ್ಞೆ ಮಾಡಿದ್ದರು: ಇನ್ನು ಮುಂದೆ ಬಹುದೇವಾರಾಧಕರ ಎಲ್ಲ ಸಂಪ್ರದಾಯಗಳಿಂದ ನಾನು ಬಿಟ್ಟು ನಿಲ್ಲುವೆನು ಮತ್ತು ಎಂದಿಗೂ ಯಾವನೇ ಸತ್ಯನಿಷೇಧಿಯನ್ನು ಸ್ಪರ್ಶಿಸಲಾರೆನು. ಹಝ್ರತ್ ಉಮರ್(ರ)ರಿಗೆ ಆಸಿಮ್(ರ) ಶಹೀದ್ ಆದ ಬಗ್ಗೆ ಮತ್ತು ಈ ಎಲ್ಲ ಘಟನೆಗಳ ಬಗ್ಗೆ ಗೊತ್ತಾದಾಗ ಅವರು ಹೀಗೆ ಹೇಳಿದರು: ಅಲ್ಲಾಹನು ತನ್ನ ದಾಸನ ಪ್ರತಿಜ್ಞೆಗೆ ಎಷ್ಟು ಬೆಲೆ ಕೊಡುತ್ತಾನೆ ಎಂದು ನೋಡಿರಿ. ಯಾವನೇ ಸತ್ಯನಿಷೇಧಿಯನ್ನು ಮುಟ್ಟಲಾರೆನು ಎಂದು ಆಸಿಮ್ ಪ್ರತಿಜ್ಞೆ ಮಾಡಿದ್ದರು. ಅವರ ಮರಣದ ನಂತರವೂ ಅಲ್ಲಾಹನು ಅವರ ಪ್ರತಿಜ್ಞೆಗೆ ಬೆಲೆ ಕೊಟ್ಟನು. ಸತ್ಯನಿಷೇಧಿಗಳಿಗೆ ಅವರನ್ನು ಸ್ಪರ್ಶಿಸಲು ಸಾಧ್ಯವಾಗಲಿಲ್ಲ.

ಉಳಿದ ಸಹಾಬಿಯರು ಕೂಡ ಬಹಳ ಶೌರ್ಯದಿಂದ ಹೋರಾಡುತ್ತಾ ಶಹೀದ್ ಆದರು. ಕೊನೆಗೆ ಮೂವರು ಸಹಾಬಿಯರು ಬಾಕಿಯುಳಿದರು. ಅವರಲ್ಲಿ ಹಝ್ರತ್ ಖುಬೈಬ್(ರ), ಹಝ್ರತ್ ಝೈದ್ ಬಿನ್ ದಸ್ನ(ರ) ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ತಾರಿಖ್(ರ) ಒಳಪಡುತ್ತಾರೆ. ಅವರು ಮೂವರನ್ನೂ ಏನೂ ಮಾಡುವುದಿಲ್ಲವೆಂದು ಶತ್ರುಗಳು ಮೊದಲು ವಾಗ್ದಾನ ಮಾಡಿದ್ದರು. ಆದರೆ ಅವರು ಸ್ವತಃ ಶರಣಾದಾಗ ಸತ್ಯನಿಷೇಧಿಗಳು ವಾಗ್ದಾನದ ಉಲ್ಲಂಘನೆ ಮಾಡಿದರು. ಅಬ್ದುಲ್ಲಾಹ್ ಬಿನ್ ತಾರಿಕ್(ರ) ಶಹೀದ್ ಆದ ನಂತರ ಶತ್ರುಗಳು ಹಣದ ಲಾಲಸೆಯಿಂದ ಖುಬೈಬ್(ರ) ಮತ್ತು ಇಬ್ನು ದಸ್ನ(ರ)ರನ್ನು ಮಕ್ಕಾದಲ್ಲಿ ಮಾರಾಟ ಮಾಡಿದರು. ಖುಬೈಬ್(ರ)ರನ್ನು ಹಾರಿಸ್ ಬಿನ್ ಆಮಿರ್ ಬಿನ್ ನೌಫಲಿನ ಪುತ್ರರು ಖರೀದಿ ಮಾಡಿದರು. ಏಕೆಂದರೆ ಖುಬೈಬ್(ರ) ಬದ್ರ್ ಯುದ್ಧದಲ್ಲಿ ಹಾರಿಸ್‌ನನ್ನು ವಧಿಸಿದ್ದರು. ಝೈದ್ ಬಿನ್ ದಸ್ನ(ರ)ರನ್ನು ಸಫ್ವಾನ್ ಬಿನ್ ಉಮಯ್ಯ ಖರೀದಿ ಮಾಡಿದನು.

ಹಝ್ರತ್ ಝೈದ್ ಬಿನ್ ದಸ್ನ(ರ)ರನ್ನು ಶಹೀದ್ ಮಾಡಲು ತರಲಾದಾಗ ಅಬೂಸುಫ್‌ಯಾನ್ ಬಿನ್ ಹರಬ್ ಅವರೊಡನೆ ಕೇಳಿದರು: ಎಲೈ ಝೈದ್, ನಾನು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಕೇಳುತ್ತೇನೆ. ನಿನ್ನ ಜಾಗದಲ್ಲಿ ನಮ್ಮ ಬಳಿ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಇರಬೇಕಿತ್ತು ಮತ್ತು ನಾವು ನಿನ್ನ ಬದಲಿಗೆ ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ತಲೆಯನ್ನು ಕತ್ತರಿಸಬೇಕು ಮತ್ತು ನೀನು ನಿನ್ನ ಕುಟುಂಬದೊಂದಿಗೆ ಇರಬೇಕಿತ್ತು ಎಂದು ನೀನು ಬಯಸುವುದಿಲ್ಲವೇ? ಹಝ್ರತ್ ಝೈದ್(ರ) ಹೇಳಿದರು: ಅಲ್ಲಾಹನಾಣೆ, ನಾನು ನನ್ನ ಕುಟುಂಬದವರೊಡನೆ ಇದ್ದುಕೊಂಡಿರುವಾಗ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವ ಮನೆಯಲ್ಲಿ ಇರುವರೋ ಅಲ್ಲಿ ಅವರಿಗೆ ಒಂದು ಮುಳ್ಳು ಚುಚ್ಚಿ ನೋವಾಗುವುದನ್ನು ಕೂಡ ನಾನು ಇಷ್ಟಪಡುವುದಿಲ್ಲ. ಆಗ ಅಬುಸುಫ್‌ಯಾನ್ ಹೇಳಿದನು: ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಸಹಾಬಿಯರು ಮುಹಮ್ಮದ್‌ರನ್ನು ಪ್ರೀತಿಸುವ ಹಾಗೆ ಜನರಲ್ಲಿ ಯಾರಾದರೂ ಯಾರನ್ನಾದರೂ ಪ್ರೀತಿಸುವುದಾಗಿ ನಾನು ಕಂಡಿಲ್ಲ. ಅನಂತರ ಹಝ್ರತ್ ಝೈದ್(ರ)ರನ್ನು ಶಹೀದ್ ಮಾಡಲಾಯಿತು.

ಖುಬೈಬ್(ರ) ಮತ್ತು ಝೈದ್(ರ) ಇಬ್ಬರನ್ನೂ ಒಂದೇ ದಿವಸ ಶಹೀದ್ ಮಾಡಲಾಗಿತ್ತು ಎಂದು ಇಬ್ನು ಅಖೀರ್ ಪ್ರಸ್ತಾಪಿಸುತ್ತಾರೆ. ಅವರಿಬ್ಬರೂ ಶಹೀದ್ ಆದ ದಿನದಂದು ಹಝ್ರತ್ ಪೈಗಂಬರ್(ಸ) **ಅಲೈಕುಮುಸ್ಸಲಾಂ** ಎಂದು ಹೇಳಿದ್ದನ್ನು ಆಲಿಸಲಾಗಿತ್ತು. ಎಂದರೆ ನೀವಿಬ್ಬರ ಮೇಲೆಯೂ ಸಲಾಂ.

ಹಝ್ರತ್ ಖುಬೈಬ್(ರ)ರೊಂದಿಗೆ ಹಾರಿಸ್‌ನ ಪುತ್ರರು ಬಹಳ ಕೆಟ್ಟದ್ದಾಗಿ ವರ್ತಿಸಿದರು. ಹಝ್ರತ್ ಖುಬೈಬ್(ರ) ಅವರೊಡನೆ ಹೇಳಿದರು: ಯಾವುದೇ ಆದರಣೀಯ ಸಮುದಾಯ ಎಂದಿಗೂ ತಮ್ಮ ಕೈದಿಗಳೊಡನೆ ಹೀಗೆ ವರ್ತಿಸುವುದಿಲ್ಲ. ಸತ್ಯನಿಷೇಧಿಗಳ ಮೇಲೆ ಈ ಮಾತಿನ ಪ್ರಭಾವ ಉಂಟಾಯಿತು. ಅವರು ಅನಂತರ ಅವರೊಂದಿಗೆ ಉತ್ತಮವಾಗಿ ವರ್ತಿಸಲು ಆರಂಭಿಸಿದರು. ಹಝ್ರತ್ ಖುಬೈಬ್(ರ) ಕೈದಿಯಾಗಿದ್ದಾಗ ಒಂದು ದಿನ ಒಂದು ಮಗು ಅವರ ಸಮೀಪಕ್ಕೆ ಬಂತು. ಹಝ್ರತ್ ಖುಬೈಬ್(ರ)ರ ಕೈಯಲ್ಲಿ ಆಗ ಒಂದು ಕತ್ತಿ ಇತ್ತು. ಅವರು ಮಗುವನ್ನು ಎತ್ತಿದರು. ಅದನ್ನು ನೋಡಿದ ಮಗುವಿನ ತಾಯಿಗೆ ಅವರು ಆ ಮಗುವಿಗೆ ಏನಾದರೂ ಹಾನಿ ಮಾಡುವರೋ ಎಂಬ ಭಯ ಉಂಟಾಯಿತು. ಆ ಮಹಿಳೆಯ ಮುಖದಲ್ಲಿ ಗೋಚರಿಸುತ್ತಿದ್ದ ಆ ಭಯವನ್ನು ನೋಡಿ ಹಝ್ರತ್ ಖುಬೈಬ್(ರ) ಹೇಳಿದರು: ನಾನು ಈ ಮಗುವಿಗೆ ಹಾನಿ ಉಂಟುಮಾಡುವೆನೋ ಎಂಬ ಭಯ ನಿನಗೆ ಇದೆಯೇ? ಅಲ್ಲಾಹನಾಣೆ ನಾನು ಹಾಗೆ ಮಾಡಲಾರೆ. ಆ ಮಹಿಳೆ ಹೇಳುತ್ತಾಳೆ: ಖುಬೈಬ್(ರ)ಗಿಂತ ಉತ್ತಮವಾದ ಕೈದಿಯನ್ನು ನಾನು ಎಂದಿಗೂ ನೋಡಿಲ್ಲ. ದ್ರಾಕ್ಷೆಯ ಒಂದು

ಗೊಂಚಲು ಅವರ ಕೈಯಲ್ಲಿ ಇರುವುದಾಗಿಯೂ ಅವರು ಅದರಿಂದ ತಿನ್ನುವುದಾಗಿಯೂ ನಾನು ಒಮ್ಮೆ ನೋಡಿದ್ದೆ. ಅವರನ್ನು ಸರಪಳಿಯಿಂದ ಕಟ್ಟಲಾಗಿತ್ತು. ಆ ದಿನಗಳಲ್ಲಿ ಮಕ್ಕದಲ್ಲಿ ಯಾವುದೇ ಹಣ್ಣು ಇದ್ದಿರಲಿಲ್ಲ. ಅದು ಅಲ್ಲಾಹನು ಹಝ್ರತ್ ಖುಬೈಬ್[ರ]ರಿಗೆ ನೀಡಿದ ಆಹಾರವಾಗಿತ್ತು.

ಶಹೀದ್ ಮಾಡಲಿಕ್ಕಾಗಿ ಖುರೈಶಿಯರು ಅವರನ್ನು ಹರಮಿನಿಂದ ಹೊರಗೆ ಕೊಂಡು ಹೋಗುವಾಗ ಅವರು ಎರಡು ರಕಅತ್ ನಮಾಝ್ ನಿರ್ವಹಿಸಲು ಅನುಮತಿ ಕೇಳಿದರು. ಖುರೈಶಿಯರು ಅವರಿಗೆ ಅನುಮತಿ ಕೊಟ್ಟರು. ಹಝ್ರತ್ ಖುಬೈಬ್[ರ] ನಮಾಝ್ ನಿರ್ವಹಿಸಿದರು ಮತ್ತು ಹೀಗೆ ಹೇಳಿದರು: ನಾನು ಮರಣ ಭಯದ ಕಾರಣದಿಂದ ತಡಮಾಡುತ್ತಿದ್ದೇನೆ ಎಂದು ನೀವು ಹೇಳುವಿರಿ ಎಂಬ ಚಿಂತೆಯಿಂದ ನಾನು ನಮಾಝನ್ನು ಹ್ರಸ್ವವಾಗಿ ನಿರ್ವಹಿಸಿದೆ. ಅನಂತರ ಅವರು ಅಲ್ಲಾಹನಲ್ಲಿ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಈ ಶತ್ರುಗಳನ್ನು ಒಬ್ಬೊಬ್ಬರನ್ನಾಗಿ ನಾಶಮಾಡು. ಹಝ್ರತ್ ಖುಬೈಬ್[ರ] ಒಂದು ಪದ್ಯವನ್ನು ಸಹ ಹೇಳಿದರು. ಅದರ ಅರ್ಥ ಹೀಗಿದೆ: ನಾನು ಮುಸ್ಲಿಮನಾಗಿರುವ ಸ್ಥಿತಿಯಲ್ಲಿ ವಧಿಸಲ್ಪಡುತ್ತಿರುವಾಗ ಅಲ್ಲಾಹನಿಗಾಗಿ ಯಾವ ಭಾಗಕ್ಕೆ ಬೀಳುವೆನು ಎಂಬುದರ ಬಗ್ಗೆ ನನಗೆ ಪರಿವೆ ಇಲ್ಲ. ನನ್ನ ಬೀಳುವಿಕೆ ಅಲ್ಲಾಹನಿಗಾಗಿದೆ ಮತ್ತು ಅವನು ಬಯಸುವುದಾದರೆ ತುಂಡರಿಸಲಾದ ದೇಹದ ಭಾಗಗಳನ್ನು ಅನುಗ್ರಹಿಸಬಹುದು. ಅನಂತರ ಸತ್ಯನಿಷೇಧಿಗಳು ಅವರನ್ನು ಅತ್ಯಂತ ಕ್ರೂರವಾಗಿ ಶಹೀದ್ ಮಾಡಿದರು.

(ಹುಝೂರ್ ಹೇಳಿದರು:) ಇದು ಮರಣ ಭಯವಿಲ್ಲದ ಆ ಸಹಾಬಿಯರ ಸ್ಥಿತಿಯಾಗಿತ್ತು ಮತ್ತು ಅವರ ತ್ಯಾಗಗಳಾಗಿದ್ದುವು. ಆ ಸಹಾಬಿಯರು ಇಸ್ಲಾಮಿಗಾಗಿ ಜೀವ ತ್ಯಾಗ ಮಾಡಲು ಸದಾ ತಯಾರಾಗಿರುವವರು ಆಗಿದ್ದರು. ಈ **ಸರಿಯದ** ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
*At, **'Masjid Mubarak',** Islamabad, Tilford, UK.* On 17-05-2024
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim |***Layout****:* U Basheer Ahmad
***Published By****:* Kannada Isha'at Team for Nazarath Nashr-O-Isha'ath, Qadian
***Email**:* *khutuba.kannada@gmail.com*
**You can find all the Sermons archived at**: www.alislam.org/friday-sermon